# ಬೊಗಸೆಯೊಡ್ಡಿ ನಿಂತು ಮಳೆಗಾಗಿ ಕಾಯುವುದು...

**ವಾಸುಕಿ ವೈಭವ್**



ಸ್ವರ ಸಂಯೋಜಿಸುವಾಗ ನನಗೆ ಕಥೆ ತುಂಬ ಸಹಾಯ ಮಾಡುತ್ತದೆ. ಸಿನಿಮಾದ ಕಥೆಯನ್ನು ಪೂರ್ತಿಯಾಗಿ ಕೇಳಿಸಿಕೊಂಡ ನಂತರವೇ ನಾನು ಸ್ವರ ಸಂಯೋಜನೆಯ ಕೆಲಸಕ್ಕೆ ಮುಂದಾಗುವುದು. ಹಾಡಿನ ಸಂದರ್ಭ ಯಾವುದು ಎಂದು ಯೋಚಿಸುತ್ತೇನೆ. ಅದು ಯಾವ ಜಾನರ್, ಅದಕ್ಕೆ ನನ್ನ ಪ್ರಯತ್ನ ಯಾವ ದಿಕ್ಕಿನಲ್ಲಿರಬೇಕು, ರೊಮ್ಯಾಂಟಿಕ್, ಸರ್ಕಾಸಮ್, ಕಾಂಟ್ರಾಸ್ಟ್ ಹೀಗೆ ಯಾವ ರೀತಿಯ ಸಂಗೀತ ಅದಕ್ಕೆ ಹೊಂದುತ್ತದೆ ಎಂದು ಯೋಚಿಸುತ್ತೇನೆ. ಹಾಡಿನ ಮೂಲಕ ಸನ್ನಿವೇಶವನ್ನು ಬೇರೆ ರೀತಿ ವ್ಯಾಖ್ಯಾನಿಸುವ ಅಗತ್ಯ ಇದೆಯಾ ಎಂದೂ ಯೋಚಿಸುತ್ತೇನೆ. ಇವೆಲ್ಲ ವಿಷಯಗಳ ಬಗ್ಗೆ ಸ್ಪಷ್ಟತೆ ಸಿಕ್ಕಿದ ಮೇಲೆಯೇ ಸಂಯೋಜನೆಯ ಕೆಲಸಕ್ಕೆ ಮುಂದಾಗುವುದು. ಬಹುತೇಕ ಸಲ ನಿರ್ದೇಶಕರು ನನ್ನನ್ನು ಯಾವ ರೀತಿ ಪ್ರಚೋದಿಸುತ್ತಾರೋ ಅದೇ ದಿಕ್ಕಿನಲ್ಲಿ ನಾನು ಟ್ಯೂನ್ ಮಾಡುವುದು.

ಕೆಲವು ಸಲ ಗಾಡಿಯಲ್ಲಿ ಹೋಗುವಾಗ, ಸ್ನಾನ ಮಾಡುವಾಗ, ನಾಟಕ ನೋಡುವಾಗ, ಬೇರೇನೋ ಕೆಲಸ ಮಾಡುತ್ತಿರುವಾಗ ಮನಸ್ಸಿಗೆ ಟ್ಯೂನ್ ಹೊಳೆದುಬಿಡುತ್ತದೆ. ಬಹುಶಃ ನಾನು ಕೇಳಿದ ಕಥೆ, ಸನ್ನಿವೇಶಗಳು ಮನಸೊಳಗೆ ಕೂತು ಕಾವು ಪಡೆಯುತ್ತಿರುತ್ತವೆ; ಅವಕ್ಕೆ ಬೇಕಾದಾಗ ಹೊರಗೆ ಬಂದುಬಿಡುತ್ತವೆ. ಗಾಡಿಯಲ್ಲಿ ಹೋಗುತ್ತಿರುವಾಗ ಟ್ಯೂನ್ ಹೊಳೆದು, ಗಾಡಿ ಸೈಡಿಗೆ ಹಾಕಿ ಫುಟ್‌ಪಾತ್ ಮೇಲೆ ಕೂತು ಆ ಟ್ಯೂನ್ ಅನ್ನು ಬೆಳೆಸಿದ್ದೂ ಇದೆ. ಕೆಲವೊಮ್ಮೆ ಯಾವುದೋ ಮೀಟಿಂಗ್‌ನಲ್ಲಿ ಕೂತಾಗ ಟ್ಯೂನ್ ಹೊಳೆದುಬಿಡುತ್ತವೆ. ಆಗ ಮೊಬೈಲಲ್ಲಿ ರೆಕಾರ್ಡ್ ಮಾಡಿಟ್ಟುಕೊಳ್ಳುತ್ತೇನೆ ಅಥವಾ ನೋಟ್ಸ್ ಮಾಡಿಟ್ಟುಕೊಳ್ಳುತ್ತೇನೆ. ಮತ್ತೆ ಮನೆಗೆ ಬಂದು ಕೂತು ಅದನ್ನು ಬೆಳೆಸಲು ಪ್ರಯತ್ನಪಡುತ್ತೇನೆ.

ಒಬ್ಬ ಕಥೆಗಾರನಿಗೆ ಕಥೆಯ ಎಳೆ ಹೇಗೆ ಹೊಳೆಯುತ್ತದೆಯೋ ಹಾಗೆಯೇ ಟ್ಯೂನ್ ಕೂಡ. ಅದು ಹೇಗೆ ಹುಟ್ಟಿಕೊಳ್ಳುತ್ತದೆ ಎನ್ನುವುದು ನನಗೂ ಬೆರಗು ಹುಟ್ಟಿಸುವ ಸಂಗತಿಯೇ. ಹೇಗೆ